# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 519
ಮಾನ್ಯ ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 20.08.2026
ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವರ್ಷವಾರು ಹಾಗೂ ಜಿಲ್ಲಾವಾರು ಮಹಿಳೆಯರು ಕಾಣೆಯಾದ ಕುರಿತು ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಅವರ ವಯೋಮಾನದವಾರು ವಿವರವೇನು; ದಾಖಲಾಗಿರುವ ಪ್ರಕರಣಗಳಲ್ಲಿ ಎಷ್ಟು ಮಹಿಳೆಯರನ್ನು ಇದುವರೆಗೆ ಪತ್ತೆಹಚ್ಚಲಾಗಿದೆ; ಬಾಕಿಯೆಷ್ಟು; | ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಮಂಗಳೂರು ನಗರದ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರು ಕಾಣೆಯಾದ ಕುರಿತು ದಾಖಲಾದ ಪ್ರಕರಣಗಳ ವಿವರಗಳನ್ನು <u>ಅನುಬಂಧ</u>ದಲ್ಲಿ ಒದಗಿಸಲಾಗಿದೆ. |
| ಆ | ಇನ್ನೂ ಪತ್ತೆಯಾಗದ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆ ಇದುವರೆಗೆ ಕೈಗೊಂಡಿರುವ ತನಿಖಾ ಕ್ರಮಗಳು ರಚಿಸಲಾಗಿರುವ ವಿಶೇಷ ತನಿಖಾ ತಂಡಗಳು (SIT), ಮಾನವ ಕಳ್ಳಸಾಗಣೆ ತಡೆ ಘಟಕಗಳು (AHTU), ಸೈಬರ್ ವಿಶ್ಲೇಷಣೆ, ಸಿಸಿಟಿವಿ ದೃಶ್ಯಾವಳಿ ಪರಿಶೀಲನೆ ಮೊಬೈಲ್ ಕರೆ ವಿವರ (CDR), ವಿಶ್ಲೇಷಣೆ ಹಾಗೂ ಅಂತರ್ ರಾಜ್ಯ ಪೊಲೀಸ್ ಸಮನ್ವಯದ ಮೂಲಕ ಕೈಗೊಂಡ ಕ್ರಮಗಳ ವಿವರವೇನು; | ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಮಂಗಳೂರು ನಗರದ ವ್ಯಾಪ್ತಿಯಲ್ಲಿ ಕಾಣೆಯಾದ ಮಹಿಳೆಯರನ್ನು ಪತ್ತೆ ಹಚ್ಚಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:<br>• ಮಹಿಳೆಯರ ಕಾಣೆಯಾದ ಪ್ರಕರಣಗಳಲ್ಲಿ ಸಿಸಿ ಟಿವಿ ದೃಶ್ಯಾವಳಿ ಪರಿಶೀಲನೆ ಮಾಡಿ ಮೊಬೈಲ್ ಕರೆಗಳ ಪರಿಶೀಲನೆ ನಡೆಸಿ ಹಾಗೂ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ ಕಾಣೆಯಾದವರ ಪತ್ತೆಗೆ ಪ್ರಯತ್ನಿಸಲಾಗುತ್ತಿದೆ.<br>• ಕಾಣೆಯಾದ ಮಹಿಳೆಯರು ಮಾನವ ಕಳ್ಳಸಾಗಾಣಿಕೆ ಪ್ರಕರಣದ ಸಂತ್ರಸ್ತರಾಗಿದ್ದಲ್ಲಿ ಸದರಿ ಪ್ರಕರಣವನ್ನು AHTU ಘಟಕಕ್ಕೆ ವರ್ಗಾಯಿಸಿ ಹೆಚ್ಚಿನ ತನಿಖೆಯನ್ನು ನಡೆಸಲಾಗುವುದು.<br>• ಕಾಣೆಯಾದ ಮಹಿಳೆಯರು ಇತರೆ ರಾಜ್ಯಗಳಲ್ಲಿ ಇರುವ ಬಗ್ಗೆ ಮಾಹಿತಿ ಬಂದಲ್ಲಿ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಸದರಿ ಮಹಿಳೆಯರನ್ನು ಪತ್ತೆ ಹಚ್ಚಲಾಗುತ್ತಿದೆ.<br>• ಪ್ರಕರಣದ ಸ್ವರೂಪಕ್ಕೆ ಅನುಗುಣವಾಗಿ ಈಗಾಗಲೇ ಪ್ರಧಾನ ಕಛೇರಿಯ ಸುತ್ತೋಲೆ ಹಾಗೂ ಎಸ್.ಓ.ಪಿ |

ಗಳಲ್ಲಿ ತಿಳಿಸಿರುವಂತೆ ಠಾಣಾ ಮಟ್ಟದಲ್ಲಿ ಮಹಿಳಾ ಸಿಬ್ಬಂದಿಗಳನ್ನೊಳಗೊಂಡ 4 ಜನ ಅಧಿಕಾರಿ ಸಿಬ್ಬಂದಿಗಳ ವಿಶೇಷ ತನಿಖಾ ತಂಡವನ್ನು ರಚಿಸಿ ಪತ್ತೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

- CDR ವಿಶ್ಲೇಷಣೆ ಹಾಗೂ ಅಂತರ್ ರಾಜ್ಯ ಪೊಲೀಸ್ ಸಮನ್ವಯದ ಮೂಲಕ ಮತ್ತು ಇನ್ನಿತರ ವೆಬ್ ಪೋರ್ಟಲ್‌ಗಳ ಮುಖಾಂತರ ಇನ್ನೂ ಪತ್ತೆಯಾಗದ ವ್ಯಕ್ತಿಗಳನ್ನು ಪತ್ತೆಹಚ್ಚಲು ನಿರಂತರ ಪ್ರಯತ್ನಿಸಲಾಗುತ್ತಿದೆ.

- ಮಹಿಳೆಯರ ಸುರಕ್ಷತೆಗಾಗಿ ವಿವಿಧ ಹೆಸರುಗಳ ಅಡಿಯಲ್ಲಿ ವಿಶೇಷ ಪಡೆಗಳನ್ನು ರಚಿಸಲಾಗಿದೆ. ಸದರಿ ಪಡೆಗಳಿಂದ ನಗರ ಹಾಗೂ ಜಿಲ್ಲಾ ವ್ಯಾಪ್ತಿಯ ಶಾಲಾ-ಕಾಲೇಜುಗಳು, ಪಾರ್ಕ್‌ಗಳು, ಹಾಸ್ಟೆಲ್‌ಗಳು, ಪಿಜಿಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಹಾಗೂ ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುವ ಇತರೆ ಸ್ಥಳಗಳಲ್ಲಿ ಪ್ರತಿದಿನ ಗಸ್ತು ಕರ್ತವ್ಯ ನಿರ್ವಹಿಸಲಾಗುತ್ತಿದೆ.

- ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು, ವಿಮಾನ ನಿಲ್ದಾಣಗಳು, ಜನನಿಬಿಡ ಪ್ರದೇಶಗಳು ಹಾಗೂ ಇತರೆ ಪ್ರಮುಖ ಸ್ಥಳಗಳನ್ನು ಗುರುತಿಸಿ CCTV ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಅವುಗಳ ಮೂಲಕ ಮಹಿಳೆಯರ ಕಳ್ಳಸಾಗಣೆಯಲ್ಲಿ ತೊಡಗಿರುವವರ ಚಟುವಟಿಕೆಗಳ ಮೇಲೆ ನಿಗಾ ವಹಿಸಲಾಗುತ್ತಿದೆ.

- ಮಾನವ ಕಳ್ಳಸಾಗಣೆ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಮಾನವ ಕಳ್ಳಸಾಗಣೆ ನಿಷೇಧ ಘಟಕ, ಸಂಬಂಧಪಟ್ಟ SCRB (ರಾಜ್ಯ ಅಪರಾಧ ದಾಖಲೆ ಘಟಕ) ಹಾಗೂ NCRB (ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ) ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಮಾನವ ಕಳ್ಳಸಾಗಣೆ ಅಪರಾಧಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

- ಅಪಹರಣಕ್ಕೊಳಗಾದ ಮಹಿಳೆಯರ ಹಾಗೂ ಆರೋಪಿತರ ಮೊಬೈಲ್ ಸಂಖ್ಯೆ ಇ-ಮೇಲ್ ಐಡಿ

| | | |
|---|---|---|
| | | ಮತ್ತು ಸಾಮಾಜಿಕ ಜಾಲತಾಣಗಳಾದ WhatsApp, Facebook, Instagram ಮುಂತಾದವುಗಳ ಕುರಿತು ಕಾನೂನುಬದ್ಧವಾಗಿ ಪರಿಶೀಲನೆ ನಡೆಸಿ, ಅವರ ಪತ್ತೆಗಾಗಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>• ಅಗತ್ಯವಿರುವ ಸಂದರ್ಭಗಳಲ್ಲಿ ಲುಕ್‌ಔಟ್ ನೋಟಿಸ್‌ಗಳನ್ನು ಹೊರಡಿಸಿ, ಅಕ್ಕಪಕ್ಕದ ಜಿಲ್ಲೆಗಳಲ್ಲಿ ಕಾಣೆಯಾದ ಮಹಿಳೆಯರ ಕುರಿತು ಶೋಧ ಕಾರ್ಯ ನಡೆಸಲಾಗುತ್ತಿದೆ. |
| ಇ | ಪತ್ತೆಯಾಗದ ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳನ್ನು ಮಾನವ ಕಳ್ಳಸಾಗಣೆ, ಬಲವಂತದ ವಿವಾಹ, ಲೈಂಗಿಕ ಶೋಷಣೆ, ಬಲವಂತದ ಕಾರ್ಮಿಕತೆ ಅಥವಾ ಇತರ ಸಂಘಟಿತ ಅಪರಾಧಗಳೊಂದಿಗೆ ಸಂಬಂಧ ಹೊಂದಿರುವ ಸಾಧ್ಯತೆಯ ಹಿನ್ನೆಲೆಯಲ್ಲಿ ತನಿಖೆ ನಡೆಸಲಾಗಿದೆ; ಅದರ ಫಲಿತಾಂಶವೇನು; | ಪತ್ತೆಯಾಗದ ಪ್ರಕರಣಗಳಲ್ಲಿ ಬಲವಂತದ ವಿವಾಹ, ಲೈಂಗಿಕ ಶೋಷಣೆ ಅಥವಾ ಬಲವಂತದ ಕಾರ್ಮಿಕತೆಯ ಸಾಧ್ಯತೆಗಳ ದೃಷ್ಟಿಯಿಂದಲೂ ತನಿಖೆಯನ್ನು ಕೈಗೊಳ್ಳಲಾಗುತ್ತಿದೆ. |
| ಈ | ಕಾಣೆಯಾದ ಮಹಿಳೆಯರನ್ನು ಶೀಘ್ರ ಪತ್ತೆ ಹಚ್ಚುವ ಉದ್ದೇಶದಿಂದ Track Child, CCTNS, ZIPNET ಹಾಗೂ ಇತರ ರಾಷ್ಟ್ರೀಯ ಅಥವಾ ರಾಜ್ಯಮಟ್ಟದ ಡಿಜಿಟಲ್ ವ್ಯವಸ್ಥೆಗಳ ಮೂಲಕ ಕೈಗೊಂಡಿರುವ ಕ್ರಮಗಳು ಮತ್ತು ಅವುಗಳಿಂದ ದೊರೆತಿರುವ ಫಲಿತಾಂಶಗಳ ವಿವರಗಳೇನು; | ಕಾಣೆಯಾದ ಮಹಿಳೆಯರನ್ನು ಶೀಘ್ರವಾಗಿ ಪತ್ತೆಹಚ್ಚುವ ಉದ್ದೇಶದಿಂದ ಪೊಲೀಸ್ ಇಲಾಖೆಯು **CCTNS/Police IT, Cri-Mac , ZIPNET,** ನಂತಹ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಡಿಜಿಟಲ್ ವ್ಯವಸ್ಥೆಗಳನ್ನು ಬಳಸಿಕೊಂಡು ಮಹಿಳೆಯರ ವಿವರಗಳನ್ನು ದಾಖಲಿಸಿ, ಸಂಬಂಧಿತ ಪೊಲೀಸ್ ಘಟಕಗಳು ಮತ್ತು ಇತರ ರಾಜ್ಯಗಳ ಪೊಲೀಸ್ ಇಲಾಖೆಗಳೊಂದಿಗೆ ಮಾಹಿತಿ ಹಂಚಿಕೊಳ್ಳುವ ಕ್ರಮಗಳನ್ನು ಪಾಲಿಸಲಾಗುತ್ತಿದೆ.<br>ಡಿಜಿಟಲ್ ವ್ಯವಸ್ಥೆಗಳ ಮೂಲಕ ಹಲವಾರು ಪ್ರಕರಣಗಳಲ್ಲಿ ಪತ್ತೆಗೆ ಉಪಯುಕ್ತ ಮಾಹಿತಿಯನ್ನು ಪಡೆಯಲಾಗಿರುತ್ತದೆ. |
| ಉ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಹಿಳೆಯರ ನಾಪತ್ತೆ ಪ್ರಕರಣಗಳನ್ನು ತಡೆಗಟ್ಟಲು ತನಿಖೆಯನ್ನು ಪರಿಣಾಮಕಾರಿಯಾಗಿಸಲು ಹಾಗೂ ಪತ್ತೆಯಾದ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸರ್ಕಾರ ರೂಪಿಸಿರುವ ವಿಶೇಷ ಕಾರ್ಯ ಯೋಜನೆ ಅನುದಾನ ಸಿಬ್ಬಂದಿ | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಹಿಳೆಯರ ನಾಪತ್ತೆ ಪ್ರಕರಣಗಳನ್ನು ತಡೆಗಟ್ಟಲು ತನಿಖೆಯನ್ನು ಪರಿಣಾಮಕಾರಿಯಾಗಿಸಲು ಹಾಗೂ ಪತ್ತೆಯಾದ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸರ್ಕಾರ ರೂಪಿಸಿರುವ ವಿಶೇಷ ಕಾರ್ಯ ಯೋಜನೆಗಳು ಈ ಕೆಳಕಂಡಂತಿದೆ;<br>• ಕಾಣೆಯಾದವರ ಪತ್ತೆಯ ಬಗ್ಗೆ District Missing Persons Unit (DMPU) ಘಟಕವನ್ನು ರಚಿಸಿದ್ದು |

| | | |
|---|---|---|
| | ನೇಮಕಾತಿ ಹಾಗೂ ಜಾಗೃತಿ ಕಾರ್ಯಕ್ರಮಗಳ ವಿವರವೇನು? | ಅದಕ್ಕೆ ಹೆಚ್ಚುವರಿ ಪೊಲೀಸ್ ಅಧೀಕ್ಷಕರು-1 ಮೇಲ್ವಿಚಾರಕರಾಗಿರುತ್ತಾರೆ.<br>• ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಈಗಾಗಲೇ Missing Person Squad (MPS) ತಂಡಗಳನ್ನು ರಚಿಸಲಾಗಿರುತ್ತದೆ.<br>• ಸದರಿ ತಂಡವು ಪಿ.ಎಸ್.ಐ ದರ್ಜೆಯ ಅಧಿಕಾರಿಯವರ ಉಸ್ತುವಾರಿಯಲ್ಲಿ 04 ಜನ ಸಿಬ್ಬಂದಿಯವರೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಅವರಲ್ಲಿ ಓರ್ವ ಮಹಿಳಾ ಪೊಲೀಸ್ ಸಿಬ್ಬಂದಿ ಇರುತ್ತಾರೆ.<br>• ರಾಜ್ಯ ಸರ್ಕಾರ ಜಾರಿಗೆ ತಂದಿರುವ ಅಕ್ಕ ಪಡೆಗಳ ಗಸ್ತು ಹೆಚ್ಚಿಸಿದ್ದು ಅದರಲ್ಲಿ ನುರಿತ ಮಹಿಳಾ ಸಿಬ್ಬಂದಿಗಳನ್ನು ನೇಮಿಸಲಾಗಿದೆ.<br>• ಅದಲ್ಲದೇ ಪ್ರತೀ ಗ್ರಾಮಗಳಲ್ಲಿ ಮಹಿಳೆಯರಿಗೆ ವಿಶೇಷ ಅರಿವು ಮೂಡಿಸುವ ಕಾರ್ಯ ಕ್ರಮ ಮತ್ತು ಶಾಲಾ ಕಾಲೇಜುಗಳಿಗೆ ಅಧಿಕಾರಿ ಸಿಬ್ಬಂದಿಗಳು ಭೇಟಿ ನೀಡಿ ಶಾಲಾ ಸಮಿತಿಯೊಂದಿಗೆ ಶಾಲಾ ಶಿಕ್ಷಕರು ಮತ್ತು ಮಕ್ಕಳಿಗೆ ಅರಿವು ಮೂಡಿಸುವ ಕ್ರಮವನ್ನು ಹೆಚ್ಚಿಸಲಾಗಿದೆ.<br>• ಮಹಿಳೆಯರು ಮತ್ತು ಅಪ್ರಾಪ್ತ ಬಾಲಕಿಯರ ಸುರಕ್ಷತೆ, ಮಾನವ ಕಳ್ಳಸಾಗಣೆ, ಬಾಲ್ಯವಿವಾಹ, ಮಾದಕ ವಸ್ತುಗಳ ದುರುಪಯೋಗ ಮುಂತಾದವುಗಳ ಕುರಿತು ಮುನ್ನೆಚ್ಚರಿಕೆ ಹಾಗೂ ಜಾಗೃತಿ ಮೂಡಿಸುವುದು ಇದರ ಉದ್ದೇಶವಾಗಿದೆ.<br>• ಸೂಕ್ಷ್ಮ ಪ್ರದೇಶಗಳಲ್ಲಿ ಗಸ್ತು, ಸಾರ್ವಜನಿಕರೊಂದಿಗೆ ಸಂಪರ್ಕ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಈ ವ್ಯವಸ್ಥೆಯಡಿ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 77 ಪಿಸಿಹೆಚ್ 2026

([illegible])
ಗೃಹ ಸಚಿವರು

# ಅನುಬಂಧ

## ದಕ್ಷಿಣ ಕನ್ನಡ

| ವರ್ಷ | ವಯೋಮಾನದವಾರು ವಿವರ | ಕಾಣೆಯಾದ ಮಹಿಳೆಯರ ಪ್ರಕರಣಗಳ ಸಂಖ್ಯೆ | ಪತ್ತೆಯಾದ ಮಹಿಳೆಯರ ಪ್ರಕರಣಗಳ ಸಂಖ್ಯೆ | ಪತ್ತೆಗೆ ಬಾಕಿ ಇರುವ ಮಹಿಳೆಯರ ಪ್ರಕರಣಗಳ ಸಂಖ್ಯೆ |
|---|---|---|---|---|
| 2024 | 18-30 | 33 | 32 | 1 |
| | 31-45 | 31 | 31 | 0 |
| | 46-60 | 7 | 7 | 0 |
| | 60 ಮೇಲ್ಪಟ್ಟು | 0 | 0 | 0 |
| | **ಒಟ್ಟು** | **71** | **70** | **1** |
| | | | | |
| 2025 | 18-30 | 36 | 36 | 0 |
| | 31-45 | 21 | 21 | 0 |
| | 46-60 | 3 | 3 | 0 |
| | 60 ಮೇಲ್ಪಟ್ಟು | 3 | 2 | 1 |
| | **ಒಟ್ಟು** | **63** | **62** | **1** |
| | | | | |
| 2026 (31 ಜುಲೈ ವರೆಗೆ) | 18-30 | 24 | 24 | 0 |
| | 31-45 | 16 | 16 | 0 |
| | 46-60 | 3 | 3 | 0 |
| | 60 ಮೇಲ್ಪಟ್ಟು | 3 | 3 | 0 |
| | **ಒಟ್ಟು** | **46** | **46** | **0** |

**ಉಡುಪಿ**

| ವರ್ಷ | ವಯೋಮಾನದವಾರು ವಿವರ | ಕಾಣೆಯಾದ ಮಹಿಳೆಯರ ಪ್ರಕರಣಗಳ ಸಂಖ್ಯೆ | ಪತ್ತೆಯಾದ ಮಹಿಳೆಯರ ಪ್ರಕರಣಗಳ ಸಂಖ್ಯೆ | ಪತ್ತೆಗೆ ಬಾಕಿ ಇರುವ ಮಹಿಳೆಯರ ಪ್ರಕರಣಗಳ ಸಂಖ್ಯೆ |
|---|---|---|---|---|
| 2024 | 18-30 | 78 | 78 | 0 |
| | 31-45 | 24 | 24 | 0 |
| | 46-60 | 4 | 4 | 0 |
| | 60 ಮೇಲ್ಪಟ್ಟು | 5 | 3 | 2 |
| | **ಒಟ್ಟು** | **111** | **109** | **2** |
| | | | | |
| 2025 | 18-30 | 53 | 53 | 0 |
| | 31-45 | 16 | 15 | 1 |
| | 46-60 | 0 | 0 | 0 |
| | 60 ಮೇಲ್ಪಟ್ಟು | 4 | 4 | 0 |
| | **ಒಟ್ಟು** | **73** | **72** | **1** |
| | | | | |
| 2026 (31 ಜುಲೈ ವರೆಗೆ) | 18-30 | 37 | 35 | 2 |
| | 31-45 | 10 | 10 | 0 |
| | 46-60 | 1 | 1 | 0 |
| | 60 ಮೇಲ್ಪಟ್ಟು | 2 | 2 | 0 |
| | **ಒಟ್ಟು** | **50** | **48** | **2** |

## <u>ಮಂಗಳೂರು ನಗರ</u>

| ವರ್ಷ | ವಯೋಮಾನದವಾರು ವಿವರ | ಕಾಣೆಯಾದ ಮಹಿಳೆಯರ ಪ್ರಕರಣಗಳ ಸಂಖ್ಯೆ | ಪತ್ತೆಯಾದ ಮಹಿಳೆಯರ ಪ್ರಕರಣಗಳ ಸಂಖ್ಯೆ | ಪತ್ತೆಗೆ ಬಾಕಿ ಇರುವ ಮಹಿಳೆಯರ ಪ್ರಕರಣಗಳ ಸಂಖ್ಯೆ |
|---|---|---|---|---|
| 2024 | 18-30 | 68 | 67 | 1 |
| | 31-45 | 18 | 18 | - |
| | 46-60 | 05 | 5 | - |
| | 60 ಮೇಲ್ಪಟ್ಟು | 03 | 3 | - |
| | **ಒಟ್ಟು** | **94** | **93** | **01** |
| | | | | |
| 2025 | 18-30 | 72 | 70 | 2 |
| | 31-45 | 10 | 10 | |
| | 46-60 | 4 | 3 | 1 |
| | 60 ಮೇಲ್ಪಟ್ಟು | 4 | 4 | |
| | **ಒಟ್ಟು** | **90** | **87** | **3** |
| | | | | |
| 2026 (31 ಜುಲೈ ವರೆಗೆ) | 18-30 | 41 | 38 | 3 |
| | 31-45 | 9 | 9 | - |
| | 46-60 | 2 | 1 | 1 |
| | 60 ಮೇಲ್ಪಟ್ಟು | 2 | 1 | 1 |
| | **ಒಟ್ಟು** | **54** | **49** | **5** |